**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 237/2017**

ಹೆಸರುಃ ವೀರಬಸಪ್ಪ ಕುಸಾಲ್ಪುರ ಸಿ.ಡಬ್ಲ್ಯೂಃ 12

ವಯಸ್ಸುಃ 38 ಪಿ.ಡಬ್ಲ್ಯೂಃ 8

ತಂದೆಃ ಲಕ್ಷ್ಮಪ್ಪ ಕುಸಾಲ್ಪುರ

ಉದ್ಯೋಗಃ ಪಿ ಎಸ್ ಐ , ಚಿತ್ರದುರ್ಗ ,

ವಾಸ ಸ್ಥಳಃ ಚಿತ್ರದುರ್ಗ

ಸಾಕ್ಷಿಗೆ ದಿನಾಂಕಃ 12-03-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಅಅರವರಿಂದ ಮುಖ್ಯ ವಿಚಾರಣೆ

23.07.2016 ರಿಂದ 30.07.2018 ರವರೆಗೆ ಪಿ ಎಸ್ ಐ ಆಗಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23.07.2016 ರಂದು ಚಾಸಾ. 11 ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿ ದಿಃ 23.04.2017 ರಂದು ಚಾಸಾ.5 ರಿಂದ 7 ರವರ ಹೇಳಿಕೆ ಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ.

ನಂತರ ದಿಃ 27.04.2017 ರಂದು ಚಾಸಾ.1 ರವರ ಕಚೇರಿಯಿಂದ ದೊಂದರಘಟ್ಟ ಗ್ರಾಮದ ಸರ್ವೆ ನಂ.28/ಪಿ3 ರ ದಾಖಲಾತಿಯನ್ನು ಪಡೆಯಲು ನೀಡಿದ ಕೋರಿಕೆ ಪತ್ರಕ್ಕೆ ತಹಸೀಲ್ದಾರ್ ರವರಿಂದ ಉತ್ತರ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ದಾಖಲೆಯನ್ನು ನಿಪಿ.7 ಎಂದು ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು.

ನಂತರ ಎಫ್ ಎಸ್ ಎಲ್ ವರದಿಯನ್ನು ಪಡೆಯಲು ಕಾಯ್ದಿರಿಸಿ ತನಿಖೆ ಪೂರ್ಣಗೊಂಡಿದ್ದರಿಂದ ದಿಃ 27.04.2017 ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ**

ನಿಪಿ.7 ರಂತೆ ದಾಖಲಾತಿಗಳನ್ನು ತಹಸೀಲ್ದಾರ್ ಕಚೇರಿಯಿಂದ ಪಡೆದಿರುತ್ತೇನೆ ಎಂದರೆ ಸರಿ. ನಿಪಿ.6 ನ್ನು ತಹಸೀಲ್ದಾರ್ ಕಚೇರಿಯಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ ಎಂದರೆ ಸರಿ. ನಿಪಿ.6 ರಲ್ಲಿರುವ ದಾಖಲೆ ತಹಸೀಲ್ದಾರ್ ಕಚೇರಿಯನ್ನು ಹೊರತುಪಡಿಸಿ ಬೇರೆ ಎಲ್ಲೂ ದೊರೆಯುವುದಿಲ್ಲ ಎಂದರೆ ಸರಿ. ಸರ್ವೆ ನಂ.28/ಪಿ3 ಆರೋಪಿಗೆ ಸೇರಿದ ಜಮೀನು ಎಂದು ತನಿಖೆ ಕಾಲಕ್ಕೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.6 ನ್ನು

ಆರೋಪಿಯು ಸೃಷ್ಟಿಮಾಡಿಕೊಂಡು ಬ್ಯಾಂಕ್‌ಗೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.6 ರಲ್ಲಿ ಆರೋಪಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.6 ರಲ್ಲಿ ತಹಸೀಲ್ದಾರ್ ರವರ ಸಹಿ ಮತ್ತು ಸೀಲು ಇದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನ ಕ್ಕೆ ಮುಂದೂಡಲಾಯಿತು.**

ಸಾಕ್ಷಿಗೆ ಮದ್ಯಾಹ್ನ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ**

ನಿಪಿ.6 ರಲ್ಲಿ ತಹಸೀಲ್ದಾರ್ ಕಚೇರಿಯ ಸೀಲು ಇದೆ ಎಂದರೆ ಸರಿ. ತಹಸೀಲ್ದಾರ್ ಕಚೇರಿಯಲ್ಲಿ ಕರ್ತ್ಯವ್ಯ ನಿರ್ವಹಿಸುವ ಮ್ಯುಟೇಷನ್ ಶಾಖೆಯ ದ್ವಿತೀಯ ದರ್ಜೆ ಸಹಾಯಕರಿಂದ ಹೇಳಿಕೆ ಪಡೆದಿರುತ್ತೇನೆ ಎಂದರೆ ಸರಿ. ಪ್ರಶ್ನಿತ ಮ್ಯುಟೇಷನ್ ಪ್ರತಿಗಳನ್ನು ಚಾಸಾ.6 ರವರು ತೆಗೆದುಕೊಟ್ಟಿರುತ್ತಾರೆ ಎಂದರೆ ಸರಿ. ಮ್ಯುಟೇಷನ್ ಪ್ರತಿಗಳನ್ನು ತೆಗೆದುಕೊಟ್ಟವರನ್ನು ಆರೋಪಿಯನ್ನಾಗಿ ಮಾಡಲು ಯಾವುದೇ ಸಮಸ್ಯೆ ಇರಲಿಲ್ಲ ಎಂದರೆ ಸಾಕ್ಷಿಯು ಸದರಿ ವ್ಯಕ್ತಿಗಳು ಸಾಕ್ಷಿಧಾರರಾದ ಕಾರಣ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಶ್ನಿತ ಎರಡೂ ಮ್ಯುಟೇಷನ್ ಪ್ರತಿಗಳಲ್ಲೂ ಸಹ ತಹಸೀಲ್ದಾರ್ ರವರ ಸಹಿ ಹಾಗೂ ಸೀಲು ಇರುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂ.28/ಪಿ1 ರ ಮಾಲಿಕರು ಮಲ್ಲಿಕಾರ್ಜುನ್ ಬಿನ್ ಠಾಕ್ರಾನಾಯಕ ಹಾಗೂ ಸರ್ವೆ ನಂ.28/ಪಿ3 ರ ದಾಖಲೆಯನ್ನು ಫೋರ್ಜರಿ ಮಾಡಿ ಪಡೆದಿರುತ್ತಾರೆ ಎಂದು ತನಿಖೆಯಿಂದ ದೃಢಪಟ್ಟಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ ಹೇ ಕೇ ಸರಿ ಇದೆ.**

**01 ನೇ** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ.